

# ತರಕಾರಿ ಕೃಷಿ ಈ ಅಜ್ಜಿ ಮಾದರಿ!

ಈ ಅಜ್ಜಿಯ ವಯಸ್ಸು ಬರೋಬ್ಬರಿ 85.. ಆದರೆ ಈಕೆಯ ಉತ್ಸಾಹ, ಕ್ರಿಯಾಶೀಲ ಚಟುವಟಿಕೆ ಮಾತ್ರ 20 ಹರೆಯದ್ದು...! ಇಷ್ಟೊಂದು ಇಳಿ ವಯಸ್ಸಲ್ಲೂ ಈಕೆಯ ಬತ್ತದ ಉತ್ಸಾಹ, ತರಕಾರಿ ಕೃಷಿ ಮಾದರಿ ಎನ್ನುವಂತಿದೆ.

ಸಾಮಾನ್ಯವಾಗಿ 60 ವರ್ಷ ದಾಟಿತೆಂದರೆ ಬದುಕು ನಿವೃತ್ತಿಗೆ ಬಂದು ತಲುಪಿದೆ ಎಂದು ಭಾವಿಸುತ್ತಾರೆ. ಬದುಕಿನ ಜಂಜಾಟ ಮತ್ತಿತರ ಕಾರಣದಿಂದ ಸಾಕಪ್ಪ ಸಾಕು ಜೀವನ ಎಂದು ಎದುರುಸಿರು ಬಿಡುವವರೇ ಹೆಚ್ಚು. ಆದರೆ ಈ ವೃದ್ಧೆಗೆ 85 ವರ್ಷ ತುಂಬಿದರೂ ಇನ್ನೂ ಬದುಕಿನ ಪಯಣದ ಆಸಕ್ತಿ ಒಂದಿನಿತೂ ಕುಂದಿಲ್ಲ. ಹೀಗಾಗಿಯೇ ತಮ್ಮ ಹೊಲದಲ್ಲಿ ಹತ್ತಾರು ಮಾದರಿಯ ತರಕಾರಿ ಕೃಷಿಯನ್ನು ಕೈಗೊಂಡು ಗಮನಸೆಳೆದಿದ್ದಾರೆ.

ಹೀಗೆ ತರಕಾರಿ ಕೃಷಿಯ ಮೂಲಕ ಗಮನಸೆಳೆದವರು  ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲೂಕಿನ ವಡೇಹುಕ್ಕಳಿಯ ಪಾರ್ವತಿ ಸದಾಶಿವ ದುರ್ಗದ ಇವರು ಎಕರೆಗಟ್ಟಲೇ ಜಾಗದಲ್ಲಿ ಮಳೆಗಾಲ, ಬೇಸಿಗೆ ಹೀಗೆ ನಿರಂತರವಾಗಿ ಆಯಾ ಹಂಗಾಮಿನ ತರಕಾರಿ ಬೆಳೆಯುತ್ತಾರೆ. ಕುಟುಂಬಕ್ಕೆ ಸಾಕಾಗುವಷ್ಟು ಇಟ್ಟುಕೊಂಡು ಸುತ್ತಮುತ್ತಲಿನ ಅಗತ್ಯವಿರುವ ಹಳ್ಳಿಗರಿಗೆ ಉಚಿತವಾಗಿ ನೀಡುತ್ತಾರೆ. ಈ ಮೂಲಕ ಬದುಕಿನಲ್ಲಿ ಸಂತೃಪ್ತಿ ಕಂಡುಕೊಂಡಿದ್ದಾರೆ.

ಬೇಸಿಗೆ ಬಂತೆಂದರೆ ಸಾಕು ಇವರು ಇವರ ತರಕಾರಿ ತೋಟದಲ್ಲಿ ಹತ್ತಾರು ಜಾತಿಯ ತರಕಾರಿಗಳು ನಳನಳಿಸುತ್ತವೆ. ಬೆಂಡೆ, ಬದನೆ, ಹಸಿಮೆಣಸು, ಬೀನ್ಸ್, ಗೆಣಸು, ಹೂಕೋಸು, ಕ್ಯಾಬೇಜ್, ಟೊಮ್ಯಾಟೊ  ಮೂಲಂಗಿ, ಹರಿವೆ, ಬೀಟ್ರೂಟ್., ಹಾಗಲಕಾಯಿ, ವಿವಿಧ ಜಾತಿಯ ಸೊಪ್ಪುಗಳು ಹೀಗೆ ಒಂದಲ್ಲ ಎರಡಲ್ಲ ನಾನಾ ತರಕಾರಿಗಳನ್ನು ಬೆಳೆಯುತ್ತಾರೆ.

## ಸ್ವತಃ ಗುದ್ದಲಿ ಹಿಡಿದು....

ತರಕಾರಿ ಕೃಷಿಗೆ ವೃದ್ಧೆಯ ಶ್ರಮ ಅಪಾರ. ಗಿಡ ನೆಡುವುದರಿಂದ ಹಿಡಿದು, ನೀರುಣಿಸಿ ಬೆಳೆಸುವದರಲ್ಲಿ ತೋರುವ ಶ್ರದ್ಧೆ ನಿಜಕ್ಕೂ ಮೆಚ್ಚಲೇಬೇಕು. ಮುಂಜಾನೆ 6 ಗಂಟೆಗೆ ಎದ್ದು ತರಕಾರಿ ತೋಟದಲ್ಲಿ ಕಾಣಿಸಿಕೊಳ್ಳುತ್ತಾರೆ. ಎಕರೆಗಟ್ಟಲೆ ಜಾಗದಲ್ಲಿರುವ ಗಿಡಗಳಿಗೆಲ್ಲ ನೀರು, ಗೊಬ್ಬರ ಹೊತ್ತು ತಂದು ಹಾಕುತ್ತಾರೆ. ಅದಕ್ಕಿಂತ ಹೆಚ್ಚಾಗಿ ತಾವೇ ಸ್ವತಃ ಗುದ್ದಲಿ ಹಿಡಿದು ತರಕಾರಿ ಗಿಡಗಳ ಬುಡಕ್ಕೆ ಮಣ್ಣು ಏರಿಸಿಕೊಡುತ್ತಾರೆ. ಮನೆಗೆಲಸದಲ್ಲಿ ನೆರವಾಗುವುದರ ಜತೆಯಲ್ಲಿ ನಿತ್ಯವೂ ತರಕಾರಿ ತೋಟದಲ್ಲಿಯೇ ಇದ್ದು ಗಿಡಗಳು ಹಸಿರಾಗಿರುವಂತೆ, ಸಮೃದ್ಧವಾಗಿ ಫಲ ಬಿಡುವಂತೆ ಮಾಡುವ ಇವರ ಶ್ರಮ ಎಂಥವರಾದರೂ ಹುಬ್ಬೇರಿಸುವಂತೆ ಮಾಡುತ್ತದೆ. ಬೆಳೆದ ತರಕಾರಿಯನ್ನು ಕುಟುಂಬಕ್ಕಷ್ಟೇ ಬಳಸದೇ ಸುತ್ತಲಿನ ಹಳ್ಳಿಗರಿಗೆ. ನೆಂಟರಿಷ್ಟರಿಷ್ಟರಿಗೆಲ್ಲ ಕಳುಹಿಸಿಕೊಡುತ್ತಾರೆ. ಇವರ ತರಕಾರಿ ತೋಟ ನೋಡಿದರೆ ಯಾರಾದರೂ ಒಮ್ಮೆ ಅಬ್ಬಾ ಎನ್ನಲೇಬೇಕು.!

ಇವರಿಗೆ ಮಕ್ಕಳು, ಮೊಮ್ಮಕ್ಕಳು ಇರುವ ತುಂಬು ಕುಟುಂಬದ ಸದಸ್ಯರ ಸಹಕಾರವೂ ಇದೆ. ಕಳೆದ ಮೂರ್ನಾಲ್ಕು ದಶಕಗಳಿಂದ ನಿರಂತರವಾಗಿ ಈ ಕೃಷಿ ಕಾರ್ಯ ಕೈಗೊಂಡಿದ್ದಾರೆ. ಈ ಮೂಲಕ ಬದುಕಿನ ಮುಸ್ಸಂಜೆಯಲ್ಲೂ ಯುವ ಸಮುದಾಯಕ್ಕೆ ನಿಜಕ್ಕೂ ಮಾದರಿಯಾಗಿದ್ದಾರೆ. ಕೃಷಿಯ ಬಗ್ಗೆ ನಿರಾಸಕ್ತಿ ತಾಳುವ ಯುವಸಮೂದಾಯದವರು ಈ ವೃದ್ಧಯೆ ಕೃಷಿ ನೋಡಿಯಾದರೂ ಈ ಬಗ್ಗೆ ಆಸಕ್ತಿ ತಾಳುವುದು ಒಳಿತು ಅಲ್ಲವೇ?

★ **ಚಿತ್ರ-ಬರಹ: ಆಶಾ ಕೆರೆಗದ್ದೆ**


